3527

ಪೊಲೀಸ್ ಮಹಾ ನಿರ್ದೇಶಕರು ಹಾಗೂ
ಮಹಾ ನಿರ್ದೇಶಕರವರ ಕಛೇರಿ
ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇ...
ನಂ. 1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು – 560 042.

## ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು

ಸಂಖ್ಯೆ:ಸಿಬ್ಬಂದಿ(7)47/ನೇಮಕಾತಿ/2019–20 ದಿನಾಂಕ: 15–07–2022
ಓ.ಬಿ.ಸಂಖ್ಯೆ:170/2022

### ನೇಮಕಾತಿ ಆದೇಶ

ವಿಷಯ : ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಲ್ಲಿ ಖಾಲಿ ಇರುವ ಅಗ್ನಿಶಾಮಕ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ :
1. ನೇಮಕಾತಿ ಅಧಿಸೂಚನೆ ಸಂಖ್ಯೆ:ಸಿಬ್ಬಂದಿ(7)47/ನೇಮಕಾತಿ/2019–20, ದಿನಾಂಕ:18–06–2020
2. ಎಡಿಜಿಪಿ ನೇಮಕಾತಿ ರವರ ತಾತ್ಕಾಲಿಕ ಆಯ್ಕೆ ಪಟ್ಟಿ ಪತ್ರ ಸಂಖ್ಯೆ: 24/ನೇಮಕಾತಿ–2/2019–20, ದಿನಾಂಕ:30–11–2021
3. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ.(ಎಸ್‌ಪಿಎಲ್) 04/ಪಿಇಟಿ/2005, ದಿನಾಂಕ:31–03–2006
4. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 158 ಎಸ್‌ಎಫ್‌ಬಿ 2020 ದಿನಾಂಕ:30–04–2022
5. ಸಂಖ್ಯೆ:24/ನೇಮಕಾತಿ–2/2019–20, ದಿನಾಂಕ:08–07–2022

*********KSFES-FM***********

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಖಾಲಿ ಇರುವ ಅಗ್ನಿಶಾಮಕ ಹುದ್ದೆಗೆ ದಿನಾಂಕ:15–02–2021 ರಿಂದ 15–04–2021 ರವರೆಗೆ ನಡೆದ ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳು ಹಾಗೂ ಎಸ್.ಎಸ್.ಎಲ್.ಸಿ. / ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಶ್ರೇಯಾಂಕಗಳ ಆಧಾರದ ಮೇಲೆ ಮತ್ತು ಉಲ್ಲೇಖದಲ್ಲಿರುವ ಆದೇಶ ಮತ್ತು ಪತ್ರಗಳಿಗನುಸಾರವಾಗಿ ನೇರ ನೇಮಕಾತಿ ಮೂಲಕ ನೀವು ಅಗ್ನಿಶಾಮಕ ಹುದ್ದೆಗೆ ಆಯ್ಕೆಯಾಗಿದ್ದು, ರೂ.23500–550–24600–600–27000–650–29600–750–32600–850–36000–950–39800–1100–46400–1250–47650 ರ ವೇತನ ಶ್ರೇಣಿಯಲ್ಲಿ ಲಭ್ಯವಾಗುವ ವೇತನ ಹಾಗೂ ಇತರೆ ಭತ್ಯೆಗಳಿಗೆ ಅರ್ಹವಾಗುವಂತೆ ಹಾಗೂ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಮತ್ತು ಇತರೆ ಘನ ನ್ಯಾಯಾಲಯಗಳ ಮುಂದೆ ಉದ್ಭವಿಸುವ ವ್ಯಾಜ್ಯಗಳ ಬಗ್ಗೆ ನೀಡುವ ತೀರ್ಪುಗಳು ಮತ್ತು ಅಂತಿಮ ಆಯ್ಕೆಪಟ್ಟಿಗೆ ಒಳಪಟ್ಟಿರುವ ಷರತ್ತಿನ ಮೇರೆಗೆ ಹಾಗೂ ಯಾವುದೇ ಪ್ರಕರಣದಲ್ಲಿ ಭಾಗಿಯಾಗಿರುವುದು ಕಂಡುಬಂದಲ್ಲಿ ಸೇವೆಯಿಂದ ವಜಾ ಮಾಡುವ ನಿಬಂಧನೆಯ ಮೇರೆಗೆ ನಿಮ್ಮನ್ನು ಅಗ್ನಿಶಾಮಕ ಹುದ್ದೆಗೆ (ಗ್ರೂಪ್–ಸಿ) ತಾತ್ಕಾಲಿಕವಾಗಿ ನೇಮಕ ಮಾಡಲಾಗಿರುತ್ತದೆ.



ಮಹಾ ನಿರ್ದೇಶಕರು ಹಾಗೂ ... ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಚೇರಿ ಬೆಂಗಳೂರು 560042

ನೀವು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನದಿಂದ ಎರಡು ವರ್ಷಗಳ ಕಾಲ ಪ್ರೊಬೇಷನರಿ ಅವಧಿ (PROBATIONARY PERIOD) ಯನ್ನು ಪೂರೈಸಬೇಕಾಗಿರುತ್ತದೆ. ಈ ಪ್ರೊಬೇಷನರಿ ಅವಧಿಯಲ್ಲಿ ಯಾವುದೇ ರೀತಿಯ ಅನರ್ಹತೆ ಕಂಡುಬಂದರೆ ಯಾವುದೇ ಕಾರಣ ನೀಡದೆ ನಿಮ್ಮನ್ನು ಕೆ.ಸಿ.ಎಸ್. ಪ್ರೊಬೇಷನರಿ ನಿಯಮಗಳು 1977 ರ ಪ್ರಕಾರ ಕೆಲಸದಿಂದ ತೆಗೆದು ಹಾಕಲಾಗುವುದು.

ಈ ಆದೇಶವನ್ನು ಸ್ವೀಕರಿಸಿದ ನಂತರ ದಿನಾಂಕ:01-08-2022 ರಂದು ಬೆಳಿಗ್ಗೆ 10:00 ಘಂಟೆಗೆ **"ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ನಂ.1 ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಹಲಸೂರು ಕೆರೆ ಹತ್ತಿರ, ಬೆಂಗಳೂರು-560 042** ಇಲ್ಲಿ ವರದಿ ಮಾಡಿಕೊಳ್ಳತಕ್ಕದ್ದು. ನಿಗದಿಪಡಿಸಿದ ದಿನಾಂಕದಂದು ಹಾಜರಾಗದಿದ್ದಲ್ಲಿ ಯಾವುದೇ ಮುನ್ಸೂಚನೆಯನ್ನು ನೀಡದೆ ನಿಮ್ಮ ನೇಮಕಾತಿ ಆಯ್ಕೆಯನ್ನು ರದ್ದು ಪಡಿಸಲಾಗುವ ಅಂತಿಮ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.

**ನೀವು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಈ ಕೆಳಕಂಡ ಮೂಲ ದಾಖಲೆಗಳನ್ನು ತಪ್ಪದೇ ಹಾಜರು ಪಡಿಸಬೇಕು.**

1. ಇತ್ತೀಚಿನ ಪಾಸ್ ಪೋರ್ಟ್ ಮತ್ತು ಸ್ಟಾಂಪ್ ಅಳತೆಯ ತಲಾ ನಾಲ್ಕು ಭಾವಚಿತ್ರಗಳು
2. ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ
3. ಆಧಾರ್ ಕಾರ್ಡ್
4. ಪಾನ್ ಕಾರ್ಡ್
5. ಅಭ್ಯರ್ಥಿಯ ಹೆಸರಿನಲ್ಲಿರುವ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್ ಪುಸ್ತಕ
6. ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ತರಬೇತಿ ಮಧ್ಯೆ ಮತ್ತು ತರಬೇತಿಯ ನಂತರ ಇಲಾಖೆಗೆ ರಾಜೀನಾಮೆ, ಗೈರು ಹಾಜರಿಯಾದಲ್ಲಿ ಕರ್ನಾಟಕ ಸರ್ಕಾರದ ಆದೇಶದಂತೆ ರೂ. 1,00,000-00 (ಒಂದು ಲಕ್ಷ ರೂಪಾಯಿ ಮಾತ್ರ) ಗಳ ದಂಡನಾ ಶುಲ್ಕ ಪಾವತಿಸುವ ಬಗ್ಗೆ ರೂ.500-00 ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೋಟರಿರವರಿಂದ ದೃಢೀಕರಿಸಿ ನೀಡುವುದು.

| Sl No | Appl No.& DOB | Name | Photo & Signature | Address | Selected category |
|---|---|---|---|---|---|
| 1 | 1215273<br>30-May-01 | SATISH JAGANUR | <br> | SATISH JAGANUR<br>Gokak road, Koujalgi,<br>Gokak,<br>Belagavi,<br>Karnataka,<br>Pincode - 591227, | CAT-1_OTH |

ಮಹಾ ನಿರ್ದೇಶಕರು ಹಾಗೂ ... ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಚೇರಿ ಬೆಂಗಳೂರು 560042

**ಈ ನೇಮಕಾತಿ ಆದೇಶವು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

1. ಅಭ್ಯರ್ಥಿಗಳ ಆಯ್ಕೆ ಸಂಬಂಧವಾಗಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅಥವಾ ಇತರೆ ಘನ ನ್ಯಾಯಾಲಯಗಳಿಂದ ಹೊರ ಬೀಳುವ ತೀರ್ಪುಗಳ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ನೇಮಕಾತಿ ಪ್ರಾಧೀಕಾರ ಹೊಂದಿರುತ್ತದೆ.

2. ಅಭ್ಯರ್ಥಿಯು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಾಯ್ದೆ 1964, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವೃಂದ ಮತ್ತು ನೇಮಕಾತಿ ನಿಯಮ 2013, ಕೆ.ಸಿ.ಎಸ್.ಆರ್. ನಿಯಮ 1958 ಹಾಗೂ ಕರ್ನಾಟಕ ಫೈರ್ ಫೋರ್ಸ್ (ಎಂ.ಡಿ. & ಆರ್.ಎಸ್.) ಕಾಯಿದೆ–1971 ಮತ್ತು ತತ್ಸಂಬಂಧವಾದ ತಿದ್ದುಪಡಿಗಳಿಗೆ ಹಾಗೂ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಾವಳಿ–1977 ರ ಹಾಗೂ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮ–1977 ರ ಪ್ರಕಾರ ಯಾವುದೇ ನ್ಯಾಯಾಲಯವು ನಿಮ್ಮ ನೇಮಕಾತಿಯನ್ನು ಅನೂರ್ಜಿತ ಮತ್ತು ಪರಿಣಾಮ ಶೂನ್ಯ / ಅನಿಯಮಿತಗೊಳಿಸಿದಲ್ಲಿ, ಯಾವುದೇ ಕಾರಣಗಳಿಂದ ಆಯ್ಕೆಗೊಂಡ ಹುದ್ದೆಗೆ ಅನರ್ಹರಾಗಿ ಕಂಡುಬಂದಲ್ಲಿ, ಯಾವುದೇ ಮುನ್ಸೂಚನೆಯನ್ನು ನೀಡದೆ ನಿಮ್ಮನ್ನು ಸೇವೆಯಿಂದ ವಿಮುಕ್ತಿಗೊಳಿಸಲಾಗುವುದು.

3. ಈ ನೇಮಕಾತಿ ಆದೇಶವು ತಾತ್ಕಾಲಿಕವಾಗಿದ್ದು, ನೇಮಕಾತಿ ನಂತರ ಅಭ್ಯರ್ಥಿಯ ಗುಣ ಹಾಗೂ ಚಾರಿತ್ರ್ಯದ ಬಗ್ಗೆ ಪ್ರತಿಕೂಲ ವರದಿ ಬಂದರೆ ಅಥವಾ ಅಭ್ಯರ್ಥಿಗಳು ಸಲ್ಲಿಸಿದ ಮೂಲ ದಾಖಲಾತಿಗಳು ನಕಲಿ ಅಥವಾ ಸುಳ್ಳು ಮಾಹಿತಿ ನೀಡಿ ಹಾಜರುಪಡಿಸಿದ ದಾಖಲೆಗಳೆಂಬುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ನಿಮ್ಮನ್ನು ಸೇವೆಯಿಂದ ವಜಾ ಮಾಡುವುದರ ಜೊತೆಗೆ ನಿಮ್ಮ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.

4. ಈ ನೇಮಕಾತಿಯು ಪಿಂಚಣಿಗೆ ಸಂಬಂದಿಸಿದಂತೆ ಉಲ್ಲೇಖ(3) ರಲ್ಲಿ ಕಾಣಿಸಿರುವ ಸರ್ಕಾರದ ಆದೇಶ ಹಾಗೂ ಮುಂದಿನ ದಿನಗಳಲ್ಲಿ ಆಗಿಂದಾಗ್ಗೆ ಹೊರಡಿಸುವ ಸರ್ಕಾರಿ ಆದೇಶಗಳಿಗೆ ಒಳಪಟ್ಟಿರುತ್ತದೆ.

5. ಈ ಅವಧಿಯಲ್ಲಿ ಇವರು 06 ತಿಂಗಳ ಬುನಾದಿ ತರಬೇತಿ ಹಾಗೂ 03 ತಿಂಗಳ ರಾಜ್ಯ ವಿಪತ್ತು ಸ್ಪಂದನಾ ಪಡೆ ತರಬೇತಿ ಸೇರಿ ಒಟ್ಟು 09 ತಿಂಗಳ ಬುನಾದಿ ತರಬೇತಿ ಪಡೆಯಬೇಕಾಗಿರುತ್ತದೆ. ಹಾಗೂ ಖಾಯಂ ಪೂರ್ವ ಪರೀಕ್ಷಾ ಅವಧಿಯನ್ನು ಘೋಷಿಸುವ ಮೊದಲು ವೃಂದ ಮತ್ತ ನೇಮಕಾತಿ ನಿಯಮ–2013 ರಲ್ಲಿ ನಿಗದಿಪಡಿಸಿರುವ ಪರೀಕ್ಷೆಗಳನ್ನು ಕಡ್ಡಾಯವಾಗಿ ಉತ್ತೀರ್ಣರಾಗಬೇಕಾಗುತ್ತದೆ.

6. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಮಯ ಯಾವುದೇ ಪ್ರಯಾಣ ಭತ್ಯೆಗೆ ಅರ್ಹರಿರುವುದಿಲ್ಲ.

7. ಅಭ್ಯರ್ಥಿಗಳ ಆಯ್ಕೆ ಮೀಸಲಾತಿ ವರ್ಗವು ಅಂತಿಮ ಆಯ್ಕೆ ಪಟ್ಟಿಯಲ್ಲಿ ಪ್ರಕಟಣೆಗೊಂಡಂತೆ ಪರಿಗಣಿಸಲಾಗುವುದು.

ಕರ್ನಾಟಕ ರಾಜ್ಯ
ಅಗ್ನಿಶಾಮಕ
ಮತ್ತು ತುರ್ತು
ಸೇವೆಗಳ ಕಚೇರಿ
ಬೆಂಗಳೂರು
560042



TECNO
TAIVOS CAMON

8. ಅಭ್ಯರ್ಥಿಗಳ ಜೇಷ್ಠತೆಯನ್ನು ಕೆ.ಸಿ.ಎಸ್. (ಜೇಷ್ಠತೆ) ನಿಯಮಗಳು 1957 ರ ನಿಯಮ 5(2) ರನ್ವಯ 1222 ಅಗ್ನಿಶಾಮಕ ಹುದ್ದೆಯ ಅಂತಿಮ ಆಯ್ಕೆ ಪಟ್ಟಿಯ ಶ್ರೇಯಾಂಕ ಹಾಗೂ ರೋಸ್ಟರ್ ಪದ್ಧತಿಯಂತೆ ಪರಿಗಣಿಸಲಾಗುವುದು.
ಕರ್ತವ್ಯಕ್ಕೆ ವರದಿ ಮಾಡಿದ ದಿನಾಂಕವನ್ನು ಜೇಷ್ಠತೆಗೆ ಪರಿಗಣಿಸಲಾಗುವುದಿಲ್ಲ.

9. ಕರ್ತವ್ಯಕ್ಕೆ ವರದಿ ಮಾಡಿಕೊಂಡ ಮೊದಲ ತಿಂಗಳಿನಲ್ಲಿ ಕರ್ನಾಟಕ ವಿಮಾ ಇಲಾಖೆಯ ಆದೇಶದಂತೆ ಕನಿಷ್ಠ ಮಾಸಿಕ ವಿಮಾ ಕಂತಿನ ಮೊಬಲಗು ರೂ.2500-00 ಪಾವತಿಸಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ವಿಮೆ ಮಾಡಿಸಿಕೊಳ್ಳತಕ್ಕದ್ದು.

10. ತರಬೇತಿಯ ಅವಧಿಯಲ್ಲಿ ನೀವು ಕಡ್ಡಾಯವಾಗಿ ತರಬೇತಿ ಕೇಂದ್ರದಲ್ಲಿ ತಂಗಿರತಕ್ಕದ್ದು ಮತ್ತು ಊಟದ ಬಾಬ್ತು ಮುಂಗಡ ರೂ.5000-00 ಗಳನ್ನು ನೀವು ವರದಿ ಮಾಡಿಕೊಂಡ ದಿನದಂದು ನಿಯೋಜಿತ ಮೆಸ್ ಅಧಿಕಾರಿಯವರಲ್ಲಿ ಭರಿಸತಕ್ಕದ್ದು.

ಆರಕ್ಷಕ ಉಪ ಮಹಾ ನಿರೀಕ್ಷಕರು
ಹಾಗೂ ಅಧ್ಯಕ್ಷರು, ಅಗ್ನಿಶಾಮಕ ನೇಮಕಾತಿ ಸಮಿತಿ
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು

15/7

ಗೆ,

Application No. 1215273
SATISH JAGANUR,
Gokak road Koujalgi,
Gokak Belagavi 591227
9538795691 (ನೋಂದಣಿ ಅಂಚೆ ಮೂಲಕ)

ಪ್ರತಿಯನ್ನು ಗೌರವಗಳೊಂದಿಗೆ

1. ಮಾನ್ಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
2. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ.

1. ನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
2. ಉಪ ನಿರ್ದೇಶಕರು (ಆಡಳಿತ), (ಅಗ್ನಿ ನಿಯಂತ್ರಣ), (ತರಬೇತಿ & ಎಸ್.ಡಿ.ಆರ್.ಎಫ್) (ತಾಂತ್ರಿಕ)
3. ಸಮಾದೇಷ್ಟರು, ಆರ್.ಎ.ಮುಂಡ್ಕುರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ
4. ಸಿಬ್ಬಂದಿ(4), (6) ಮತ್ತು (8)



TECNO
TAIVOS CAMON

# ಮುಚ್ಚಳಿಕೆ ಪ್ರಮಾಣ ಪತ್ರ

ನಾನು , ವಯಸ್ಸು ವರ್ಷ, ಸಾ. ಪೋ. ತಾ.. ಜಿಲ್ಲೆ.. ಆದ ನಾನು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಅಗ್ನಿಶಾಮಕ ಹುದ್ದೆಗೆ ಆಯ್ಕೆಯಾಗಿದ್ದು, ಅದರಂತೆ ಅಗ್ನಿಶಾಮಕ ಹುದ್ದೆಗೆ ದಿನಾಂಕ: / /2022 ರಂದು ಮಾನ್ಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯವರಲ್ಲಿ ಕರ್ತವ್ಯಕ್ಕೆ ವರದಿ ಮಾಡಿರುತ್ತೇನೆ. ತರಬೇತಿ ಹಾಗೂ ತರಬೇತಿ ನಂತರ ಇಲಾಖೆಯಲ್ಲಿಯೇ ಕರ್ತವ್ಯ ಮುಂದುವರೆಸುತ್ತೇನೆ ಎಂದು ಈ ಮೂಲಕ ದೃಢಪಡಿಸುತ್ತೇನೆ. ಒಂದು ವೇಳೆ ನಾನು ತರಬೇತಿ ಹಾಗೂ ತರಬೇತಿ ನಂತರ ಈ ಹುದ್ದೆಗೆ ರಾಜೀನಾಮೆ ನೀಡುವುದಾಗಲಿ ಅಥವಾ ಅನ್ಯ ಸೇವೆಗೆ ಹೋಗುವುದಾದಲ್ಲಿ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 158 ಎಸ್‌ಎಫ್‌ಬಿ 2020, ದಿನಾಂಕ:30-04-2022 ರನ್ವಯ ರೂ. 1,00,000-00 (ಒಂದು ಲಕ್ಷ ರೂಪಾಯಿ ಮಾತ್ರ) ಗಳನ್ನು ದಂಡನಾ ಶುಲ್ಕವಾಗಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಗೆ ಪಾವತಿಸುತ್ತೇನೆಂದು ಈ ಮುಚ್ಚಳಿಕೆ ಪ್ರಮಾಣ ಪತ್ರದ (Indemnity Bond) ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ:

ದಿನಾಂಕ:

ಅಭ್ಯರ್ಥಿಯ ಹೆಸರು ಮತ್ತು ಸಹಿ.

ಉದಾ:

First Party: candidate

Second Party : DIGP. KARNATAKA STATE FIRE & EMERGENCY SERVICES

TECNO CAMON
TAIVOS

ಕರ್ನಾಟಕ ರಾಜ್ಯ ಪೊಲೀಸ್

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಅಪರ ಪೊಲೀಸ್ ಮಹಾನಿರ್ದೇಶಕರವರ ಕಛೇರಿ
ಕರ್ನಾಟಕ ರಾಜ್ಯ ಮೀಸಲು ಪೊಲೀಸ್
ಬೆಂಗಳೂರು – 560001
ದಿನಾಂಕ: 21.04.2021.

ನೋಂದಾಯಿತ ಅಂಚೆ ಮುಖಾಂತರ

ಸಂಖ್ಯೆ: 06/ಸಿಬ್ಬಂದಿ-6/ಆರ್‌ಎಸ್‌ಐ(40)/ನೇ/2019-20
ಓ.ಬಿ. ಸಂಖ್ಯೆ: 136/2021-22.

## ನೇಮಕಾತಿ ಆದೇಶ

ವಿಷಯ: ಕೆ.ಎಸ್.ಆರ್.ಪಿ.ಯ ಸ್ಪೆಷಲ್ ರಿಸರ್ವ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಸೇವಾ ನಿರತರನ್ನೊಳಗೊಂಡ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ:
1. ಅಧಿಸೂಚನೆ ಸಂಖ್ಯೆ: 86/ನೇಮಕಾತಿ-2/2019-20, ದಿನಾಂಕ: 29.08.2019.
2. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ಭಾಗಶಃ (2) ಅಂತಿಮ ಆಯ್ಕೆ ಪಟ್ಟಿ ಸಂಖ್ಯೆ: 86 / ನೇಮಕಾತಿ-2 / 2019-20, ದಿನಾಂಕ: 16.04.2021.
3. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) / 04 / ಪಿಇಟಿ / 2005, ದಿನಾಂಕ: 31.03.2006.
4. ಸರ್ಕಾರದ ಆದೇಶ ಸಂಖ್ಯೆ: ಒಇ 130 ಪೊಸಇ 2017, ದಿನಾಂಕ: 18.09.2017.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 76 ಸೇನೆನಿ 2018, ದಿನಾಂಕ: 15.02.2018.

* * * * *

ಉಲ್ಲೇಖ (1)ರ ಅಧಿಸೂಚನೆ ಮೇರೆಗೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಸ್ಪೆಷಲ್ ರಿಸರ್ವ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ಉಲ್ಲೇಖ (2)ರ ಭಾಗಶಃ (2) ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದ ಈ ಕೆಳಕಂಡ ನಿಮ್ಮನ್ನು ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಸ್ಪೆಷಲ್ ರಿಸರ್ವ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ವೇತನ ಶ್ರೇಣಿ ರೂ.37900-950-39800-1100-46400-1250-53900-1450-62600-1650-70850ರಲ್ಲಿ ಮತ್ತು ಆಗಿಂದಾಗ್ಗೆ ದೊರೆಯಬಹುದಾದ ಇತರೆ ಅರ್ಹ ಭತ್ಯೆಗಳನ್ನೊಳಗೊಂಡಂತೆ ಕನಿಷ್ಠ ವೇತನಕ್ಕೆ ನಿಗಧಿಪಡಿಸಿ, ಕೆಎಸ್‌ಆರ್‌ಪಿಯ ವಿವಿಧ ಪಡೆಗಳಿಗೆ ಸ್ಥಳ ನಿಯುಕ್ತಿಗೊಳಿಸಿ ನೇಮಕಾತಿ ಆದೇಶ ಹೊರಡಿಸಲಾಗಿದೆ. **ಸ್ಥಳ ನಿಯುಕ್ತಿ ಮಾಡಲಾದ ಪಡೆಯ ಕಮಾಂಡೆಂಟ್‌ರವರಲ್ಲಿ ದಿನಾಂಕ: 05.05.2021 ರೊಳಗಾಗಿ ತಪ್ಪದೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು.** ನಿಗದಿತ ದಿನಾಂಕದೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಯಾವುದೇ ಮುನ್ಸೂಚನೆಯನ್ನು ನೀಡದೆ ನಿಮ್ಮ ನೇಮಕಾತಿಯನ್ನು ರದ್ದುಪಡಿಸಲಾಗುವುದು.

ನೀವು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ನೇಮಕಾತಿ ಮತ್ತು ಸೇವಾ ಷರತ್ತುಗಳ) ನಿಯಮಗಳು 2009 ಹಾಗೂ 2ನೇ ತಿದ್ದುಪಡಿ ನಿಯಮಗಳು 2014 ರ ಪ್ರಕಾರ ಒಂದು ವರ್ಷ ಬುನಾದಿ ತರಬೇತಿಯನ್ನು ಪಡೆದು ತರಬೇತಿಯ ಅಂತ್ಯದಲ್ಲಿ ನಡೆಸಲಾಗುವ ನಿಗದಿತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದತಕ್ಕದ್ದು. ಬುನಾದಿ ತರಬೇತಿಯು ಪೂರ್ಣಗೊಂಡ ನಂತರ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ. ಬೆಂಗಳೂರು ಇವರು ನಿಯೋಜಿಸುವ ಕೆ.ಎಸ್.ಆರ್.ಪಿ.ಯ ಯಾವುದೇ ಪಡೆಯಲ್ಲಿ ಪ್ರಾಯೋಗಿಕ ತರಬೇತಿಯನ್ನು ಹೊಂದತಕ್ಕದ್ದು. ತರಬೇತಿಗೆ ಹಾಜರಾಗಬೇಕಾದ ಮಾಹಿತಿಯನ್ನು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರದಲ್ಲಿ ತಿಳಿಸಲಾಗುವುದು. ನೀವು ಬುನಾದಿ ತರಬೇತಿ ಒಳಗೊಂಡಂತೆ 2 ½ (ಎರಡೂವರೆ) ವರ್ಷಗಳ ಪರೀಕ್ಷಾರ್ಥ ಸೇವಾ ಅವಧಿಯಲ್ಲಿರುತ್ತೀರಿ.

ಉಲ್ಲೇಖ (4)ರ ಸರ್ಕಾರದ ಅದೇಶದನ್ವಯ ನಿಗದಿಪಡಿಸಿದ ದಿನಾಂಕದೊಳಗೆ ನೀವು ಕರ್ತವ್ಯಕ್ಕೆ ಹಾಜರಾಗುವ ದಿನಾಂಕದಿಂದ ಕನಿಷ್ಠ 5 ವರ್ಷಗಳ ಸೇವೆಯನ್ನು ಕೆ.ಎಸ್.ಆರ್.ಪಿ.ಯ ಸ್ಪೆಷಲ್ ರಿಸರ್ವ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಯಲ್ಲೇ ಸಲ್ಲಿಸುವುದಾಗಿ ರೂ.500/- ಗಳ ಛಾಪ ಕಾಗದ ಪತ್ರದಲ್ಲಿ ರೂ.2,00,000/- (ರೂಪಾಯಿ ಎರಡು ಲಕ್ಷಗಳು ಮಾತ್ರ) ಗಳ ಮುಚ್ಚಳಿಕೆ ಪ್ರಮಾಣ ಪತ್ರವನ್ನು (Indemnity Bond) ಸಲ್ಲಿಸತಕ್ಕದ್ದು.

ಈ ನೇಮಕಾತಿಯು ಪಿಂಚಣಿಗೆ ಸಂಬಂಧಿಸಿದಂತೆ ಉಲ್ಲೇಖ(3) ರಲ್ಲಿ ಕಾಣಿಸಿರುವ ಸರ್ಕಾರದ ಆದೇಶ ಹಾಗೂ ಮುಂದಿನ ದಿನಗಳಲ್ಲಿ ಆಗಿಂದಾಗ್ಗೆ ಹೊರಡಿಸುವ ಸರ್ಕಾರಿ ಆದೇಶಗಳಿಗೆ ಒಳಪಟ್ಟಿರುತ್ತದೆ.

| ಕ್ರ ಸಂ. | ಅರ್ಜಿ ಸಂಖ್ಯೆ | ನೋಂದಣಿ ಸಂಖ್ಯೆ | ಆಯ್ಕೆ ವರ್ಗ | ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ | ಸ್ಥಳ ನಿಯುಕ್ತಿಗೊಳಿಸಿದ ಪಡೆ |
|---|---|---|---|---|---|
| 2. | 1751838 | 3602287 | GM-RUR | **ಸಿದ್ಧರಾಜ ಅಥಣಿ,**<br>ಬಿನ್ ಶೆಂಕರೆಪ್ಪ,<br>ಮರೇಗುದ್ದಿ ಗ್ರಾಮ,<br>ಜಮಖಂಡಿ ತಾಲ್ಲೂಕು,<br>ಬಾಗಲಕೋಟೆ-587121.<br>ಮೊಬೈಲ್ :9972741574 | 1ನೇ ಪಡೆ, ಕೆಎಸ್ಆರ್‌ಪಿ,<br>ನಂ.60, ರಿಚ್‌ಮಂಡ್ ರಸ್ತೆ,<br>ಬೆಂಗಳೂರು-560025. |
| 3. | 1755476 | 3601276 | GM-OTH | **ಸಂಗಮೇಶ ಬೈಚಬಾಳ,**<br>ಬಿನ್ ಶಿವಾನಂದ,<br>ಫಾರ್ಮ್ ಹೌಸ್, ಉಕ್ಕಲಿ ರಸ್ತೆ,<br>ಮಸಬಿನಾಳ ಗ್ರಾಮ,<br>ಬಸವನ ಬಾಗೇವಾಡಿ ತಾಲ್ಲೂಕು,<br>ವಿಜಯಪುರ-586203<br>ಮೊಬೈಲ್ :9008695581. | 3ನೇ ಪಡೆ, ಕೆಎಸ್ಆರ್‌ಪಿ,<br>ಕೋರಮಂಗಲ,<br>ಬೆಂಗಳೂರು-560034. |
| 4. | 1760822 | 3603361 | 2A-RUR | **ರಾಯಪ್ಪ ಶಂಕರ ಗಾಣಿಗೇರ,**<br>ಬಿನ್ ಶಂಕರ ಗಾಣಿಗೇರ,<br>ಗಿರಿಸಾಗರ ಓಣಿ, ಯಾದವಾಡ,<br>ಗೋಕಾಕ ತಾಲ್ಲೂಕು,<br>ಬೆಳಗಾವಿ-591136.<br>ಮೊಬೈಲ್ :8147691838. | 3ನೇ ಪಡೆ, ಕೆಎಸ್ಆರ್‌ಪಿ,<br>ಕೋರಮಂಗಲ,<br>ಬೆಂಗಳೂರು-560034. |
| 5. | 1759746 | 3604069 | 3A-KAN | **ಹರೀಶ ಕೆ ಎಲ್,**<br>ಬಿನ್ ಲಕ್ಷ್ಮಣೇಗೌಡ,<br>ನಂ.235, ಮಾರಗೌಡನಹಳ್ಳಿ ಗ್ರಾಮ,<br>ಈಚನಹಳ್ಳಿ ರಸ್ತೆ, ಹೆಬ್ಬಾಳ ಹೋಬಳಿ,<br>ಮಾವತ್ತೂರು ಪೋಸ್ಟ್,<br>ಕೆ.ಆರ್ ನಗರ ತಾಲ್ಲೂಕು,<br>ಮೈಸೂರು-571602.<br>ಮೊಬೈಲ್ :7829207679. | 2ನೇ ಪಡೆ, ಕೆಎಸ್ಆರ್‌ಪಿ,<br>ವ್ಹಿಟಿಯು ಕ್ಯಾಂಪಸ್ ಪೋಸ್ಟ್,<br>ಬೆಳಗಾವಿ-590018. |
| 6. | 1752792 | 3606349 | CAT1-KAN | **ಅನಿಲ್ ಕುಮಾರ್ ಕೆ,**<br>ಬಿನ್ ಕೆಂಪಲಿಂಗಪ್ಪ,<br>ಯರಪೋತೇನಹಳ್ಳಿ ಗ್ರಾಮ,<br>ಹೊಸೂರು ಹೋಬಳಿ & ಪೋಸ್ಟ್,<br>ಗೌರಿಬಿದನೂರು ತಾಲ್ಲೂಕು,<br>ಚಿಕ್ಕಬಳ್ಳಾಪುರ-561210.<br>ಮೊಬೈಲ್ :9108543280. | 2ನೇ ಪಡೆ, ಕೆಎಸ್ಆರ್‌ಪಿ,<br>ವ್ಹಿಟಿಯು ಕ್ಯಾಂಪಸ್ ಪೋಸ್ಟ್,<br>ಬೆಳಗಾವಿ-590018. |
| 7. | 1762079 | 3604284 | 2A-OTH | **ರಂಜಿತ್ ಆರ್,**<br>ಬಿನ್ ರಾಮಚಂದ್ರಯ್ಯ,<br>ಮಾರುತಿ ಕೃಪ,<br>ಅನ್ನಪೂರ್ಣೇಶ್ವರಿ ದೇವಸ್ಥಾನ ಹಿಂಬಾಗ,<br>60 ಫೀಟ್ ರಸ್ತೆ ಹತ್ತಿರ, ಗೋಕುಲ ಎಕ್ಸ್‌ಟೆನ್ಷನ್,<br>ತುಮಕೂರು ತಾಲ್ಲೂಕು, ತುಮಕೂರು-572104,<br>ಮೊಬೈಲ್ :8217563256. | 2ನೇ ಪಡೆ, ಕೆಎಸ್ಆರ್‌ಪಿ,<br>ವ್ಹಿಟಿಯು ಕ್ಯಾಂಪಸ್ ಪೋಸ್ಟ್,<br>ಬೆಳಗಾವಿ-590018. |
| 8. | 1752947 | 3602170 | GM-EXS | **ಶೇಖರಪ್ಪ ಮಂಗೋಣಿ,**<br>ಬಿನ್ ಚನ್ನಬಸಪ್ಪ ಕೆ ಮಂಗೋಣಿ,<br>ಯರಿನಾರಾಯಣಪುರ, ಯರಗುಪ್ಪಿ ಪೋಸ್ಟ್,<br>ಕುಂದಗೋಳ ತಾಲ್ಲೂಕು,<br>ಧಾರವಾಡ-580023.<br>ಮೊಬೈಲ್ :9773879359. | 4ನೇ ಪಡೆ, ಕೆಎಸ್ಆರ್‌ಪಿ,<br>ಕೋರಮಂಗಲ,<br>ಬೆಂಗಳೂರು-560034. |

# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

(ಕರ್ನಾಟಕ ಸರ್ಕಾರದ ಸಂಸ್ಥೆ)

"ಖಾದಿ ಭವನ", ನಂ. 10, ಜಸ್ಮಾಭವನ ರಸ್ತೆ, ಬೆಂಗಳೂರು-560 052.

ಕಛೇರಿ : 080-2226 6852, 080-4853 8468 ಇ-ಮೇಲ್ : kviboardbangkar@gmail.com


ನಂ. ಖಾಮಂ:ಸಿಬ್ಬಂದಿ-2:722:2022-23 ದಿನಾಂಕ:23-03-2023

"ನೋಂದಾಯಿತ ಅಂಚೆ ಸ್ವೀಕೃತಿಯೊಂದಿಗೆ"

**ಅಧಿಸೂಚನೆ**

**ವಿಷಯ:-** ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಗ್ರೂಪ್-ಸಿ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸುವ ಬಗ್ಗೆ.

**ಉಲ್ಲೇಖ:-** 1) ನೇಮಕಾತಿ ಅಧಿಸೂಚನೆ ಸಂಖ್ಯೆ. ಖಾಮಂ : ಸಿಬ್ಬಂದಿ-2 : 722 : 2021-22 ದಿನಾಂಕ:22-10-2021.

2) ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ದಿನಾಂಕ:10-10-2022.

3) ಟಿ.ಸಿ.ಎಸ್ ಸಂಸ್ಥೆಯವರು ನೀಡಿರುವ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದ ದಿನಾಂಕ:13-10-2022.

******

**ಪ್ರಸ್ತಾವನೆ:-**

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಖಾಲಿ ಇರುವ ತಾಂತ್ರಿಕ ಮೇಲ್ವಿಚಾರಕರ 'ಸಿ' ಶ್ರೇಣಿಯ ಹುದ್ದೆಗಳ ನೇಮಕಾತಿಗೆ ಉಲ್ಲೇಖ-1ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ಟಿ.ಸಿ.ಎಸ್ ಸಂಸ್ಥೆಯು ಆಯ್ಕೆ ಮಾಡಿದ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಉಲ್ಲೇಖ-3ರಂತೆ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಆಯ್ಕೆಯಾದ ಅಭ್ಯರ್ಥಿಗಳಿಗೆ ನೇರ ನೇಮಕಾತಿ ಆದೇಶ ನೀಡುವ ಸಲುವಾಗಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ಸಮಯದಲ್ಲಿ ಸಲ್ಲಿಸಲಾದ ವಿದ್ಯಾರ್ಹತೆ ಪ್ರಮಾಣ ಪತ್ರಗಳ ನೈಜತೆ ಬಗ್ಗೆ ಹಾಗೂ ಮೀಸಲಾತಿ ಪ್ರಮಾಣ ಪತ್ರಗಳ ಸಿಂಧುತ್ವ ಪ್ರಮಾಣ ಪತ್ರದ ಬಗ್ಗೆ ಪರಿಶೀಲಿಸಿ ದೃಢೀಕರಿಸಲು ಸಂಬಂಧಪಟ್ಟ ಪರೀಕ್ಷಾ ಮಂಡಳಿ/ವಿಶ್ವ ವಿದ್ಯಾಲಯ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆದು ಅಭ್ಯರ್ಥಿಗಳು ಸಲ್ಲಿಸಿರುವ ದಾಖಲೆಗಳ ಬಗ್ಗೆ ನೈಜತೆ ಪ್ರಮಾಣ ಪತ್ರಗಳನ್ನು ಪಡೆದು ಪರಿಶೀಲಿಸಿ ಈ ಕೆಳಕಂಡ ಅಭ್ಯರ್ಥಿಗಳಿಗೆ ನೇರ ನೇಮಕಾತಿ ಆದೇಶ ನೀಡಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

**ನಂ. ಖಾಮಂ:ಸಿಬ್ಬಂದಿ-2:722:2022-23** ದಿನಾಂಕ:23-03-2023

**:ಆದೇಶ:**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ 2021-22ನೇ ಸಾಲಿನ ಮೂಲವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ಗ್ರೂಪ್-ಸಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ನೇಮಕ ಮಾಡಿಕೊಂಡು ಅದರಲ್ಲಿ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದಿಂದ ಆಯ್ಕೆಯಾಗಿರುವ ಈ ಕೆಳಕಂಡ ಅಭ್ಯರ್ಥಿಗಳ ವೇತನ ಶ್ರೇಣಿ ರೂ.27650-52650/-ರಲ್ಲಿ ತಾಂತ್ರಿಕ ಮೇಲ್ವಿಚಾರಕರ 'ಸಿ' ಶ್ರೇಣಿ ಹುದ್ದೆಗೆ ಈ ಕೆಳಕಂಡ ಷರತ್ತುಗಳ ಮೇರೆಗೆ ನೇಮಕ ಮಾಡಿ ಅವರುಗಳ ಹೆಸರುಗಳ ಮುಂದೆ ತೋರಿಸಿರುವ ಸ್ಥಳಕ್ಕೆ ಸ್ಥಳ ನಿಯೋಜನೆಗೊಳಿಸಿ ಆದೇಶಿಸಿದೆ. ನೇಮಕಾತಿಗೊಂಡ ಅಭ್ಯರ್ಥಿಗಳು ಈ ಆದೇಶ ತಲುಪಿದ 10 ದಿವಸಗಳ ಒಳಗಾಗಿ ನೇಮಿಸಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ತಿಳಿಸಿದೆ.

....2

ನಂ. ಖಾಮಂ:ಸಿಬ್ಬಂದಿ-2:722:2022-23

ದಿನಾಂಕ:23-03-2023

| ಕ್ರ. ಸಂ | ಟಿ.ಎಸ್.ಎಸ್ ಆಯ್ಕೆ ಪಟ್ಟಿ ಕ್ರಮ ಸಂಖ್ಯೆ | ನೊಂದಣಿ ಸಂಖ್ಯೆ | ಅಭ್ಯರ್ಥಿಗಳ ಹೆಸರು | ಆಯ್ಕೆ ಹೊಂದಿರುವ ಮೀಸಲಾತಿ | ನೇಮಕಾತಿ ಮಾಡಿ ನೇಮಿಸಿದ ಸ್ಥಳ/ಜಿಲ್ಲೆ |
|---|---|---|---|---|---|
| | | | ಮೂಲವೃಂದ | | |
| 1 | 1 | CM02010064 | ಶ್ರೀ ಬಸವರಾಜು ಬಿನ್ ಈಶಪ್ಪ, ಸಿದ್ದಗರ್ಟ್ ಕ್ಯಾಂಪ್, ಮಲ್ಲಟ್ ಹೋಬಳಿ, ಸಿರವಾರ ತಾಲ್ಲೂಕು, ರಾಯಚೂರು ಜಿಲೆ-584129. | Cat-3B | ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ,ಖಾದಿ ಭವನ, ನಂ:10, ಜಸ್ಮಾಭವನ ರಸ್ತೆ, ವಸಂತ ನಗರ ಬೆಂಗಳೂರು-52 |
| 2 | 2 | CM04160313 | ಶ್ರೀ ಪ್ರಭು ಎಸ್.ಮಲ್ಲಿಗಾರ ಬಿನ್ ಸೋಮಲಪ್ಪ, ಕಲ್ಕೆರೆ ತಾಂಡ, ಹೆರೂರು ಅಂಚೆ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ - 581148. | SC | |
| | | | ಕಲ್ಯಾಣ ಕರ್ನಾಟಕ | | |
| 1 | 1 | CM04130092 | ಶ್ರೀ ಓಂಕಾರ್ ಹಡಪಾದ್ ಬಿನ್ ಪ್ರಕಾಶ್, ಕೊರವಿ ಗ್ರಾಮ, ಕೊಡ್ಲಿ ಹೋಬಳಿ, ಕಾಳಗಿ ತಾಲ್ಲೂಕು, ಕಲಬುರಗಿ ಜಿಲ್ಲೆ | Cat-2A | ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಭವನ, ನಂ:10, ಜಸ್ಮಾಭವನ ರಸ್ತೆ, ವಸಂತ ನಗರ ಬೆಂಗಳೂರು-52 |
| 2 | 2 | CM04060267 | ಶ್ರೀ ಮಹಾದೇವ ಬಿನ್ ವೈಜಪ್ಪ, ಕಬೀರಾಬಾದ್ ಗ್ರಾಮ, ಹಳ್ಳಿಖೇಡ (ಬಿ) ಹೋಬಳಿ, ಬೆನಚಿಂಚೊಳ್ಳಿ ಅಂಚೆ, ಹುಮನಾಬಾದ್ ತಾ॥, ಬೀದರ್ ಜಿಲ್ಲೆ -585414. | ST | |
| 3 | 3 | CM04160106 | ಶ್ರೀ ವಿಶ್ವನಾಥ ವೈ ಬಿನ್ ಯಂಕನಾಯಕ, ಕಾಲ್ವಿ ತಾಂಡ, ಕಾಲ್ವಿ ಅಂಚೆ, ಹೂವಿನ ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ -583214. | SC | |

**ಷರತ್ತುಗಳು:-**

1) ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಯಾವುದೇ ಸಂದರ್ಭದಲ್ಲಿ ಒಂದು ತಿಂಗಳ ಮುಂಚಿತವಾಗಿ ಸೂಚನೆ ನೀಡಿ ನಿಮ್ಮನ್ನು ಸೇವೆಯಿಂದ ತೆಗೆದು ಹಾಕಬಹುದಾಗಿದೆ.
2) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸೇವೆಗೆ ಹಾಜರಾದ ದಿನಾಂಕದಿಂದ ಖಾದಿ ಬಟ್ಟೆಯನ್ನು ಧರಿಸತಕ್ಕದ್ದು. ಈ ಷರತ್ತು ಪಾಲಿಸದೇ ಇದ್ದಲ್ಲಿ ಸೇವೆಯಿಂದ ತೆಗೆದು ಹಾಕಬಹುದಾಗಿದೆ
3) ನಿಮ್ಮ ನೇಮಕಾತಿಗೆ ಕರ್ನಾಟಕ ರಾಜ್ಯ ಸರ್ಕಾರದ ಸೇವಾ ನಿಯಮಾವಳಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತು ಸಂಬಂಧಿಸಿದ ಇತರೇ ನಿಯಮಗಳು ಅನ್ವಯಿಸುತ್ತದೆ.
4) ನಿಮ್ಮನ್ನು ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕದ ವೃಂದದಲ್ಲಿ ಯಾವುದೇ ಸ್ಥಳಕ್ಕೆ ಯಾವಾಗ ಹಿತದೃಷ್ಟಿಯಿಂದ ನೇಮಿಸಲಾಗುವುದು/ ವರ್ಗಾಯಿಸಲಾಗುವುದು.
5) ನಿಮ್ಮ ಸೇವಾವಧಿಯ ಮೊದಲ ಎರಡು ವರ್ಷಗಳು "ಪರಿವೀಕ್ಷಣಾ ಅವಧಿ" ಆಗಿರುತ್ತದೆ. ಪರಿವೀಕ್ಷಣಾ ಅವಧಿಯು ತೃಪ್ತಿಕರವಿಲ್ಲದಿದ್ದಲ್ಲಿ, ಸೇವೆಯಿಂದ ತೆಗೆದು ಹಾಕಲಾಗುವುದು.
6) ನೀವು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಕನಿಷ್ಠ 05 ವರ್ಷಗಳ ಸೇವೆಯನ್ನು ಪೂರೈಸತಕ್ಕದ್ದು. ಒಂದು ವೇಳೆ ಖಾದಿ ಮಂಡಳಿಯ ಸೇವೆಯನ್ನು ಬಿಡುವ ಸಂದರ್ಭ ಬಂದಲ್ಲಿ ಒಂದು ತಿಂಗಳ ಮುಂಚಿತವಾಗಿ ಲಿಖಿತ ಮನವಿಯನ್ನು ನೀಡಬೇಕು. ತಪ್ಪಿದಲ್ಲಿ ಒಂದು ತಿಂಗಳ ವೇತನ ಮತ್ತಿತರ ಭತ್ಯೆಯನ್ನು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಪಾವತಿಸತಕ್ಕದ್ದು/ಕೊಡತಕ್ಕದ್ದು.

....3

ನಂ. ಖಾಮಂ:ಸಿಬ್ಬಂದಿ-2:722:2022-23 ದಿನಾಂಕ:23-03-2023

7) ನೀವು ಸೇವೆಗೆ ಹಾಜರಾಗುವ ಸಮಯದಲ್ಲಿ ಸರ್ಕಾರಿ ಸಿವಿಲ್ ಸರ್ಜನ್‌ಗೆ ಕಡಿಮೆ ಇಲ್ಲದ ಅಥವಾ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

8) ಸೇವೆಗೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯಲ್ಲಿ ಹುದ್ದೆಗೆ ನಿಗಧಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಮಾಡಿಕೊಳ್ಳತಕ್ಕದ್ದು ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ದಿನಾಂಕ:31-12-2023ರ ಒಳಗೆ ಪೂರ್ಣಗೊಳಿಸಿ ದೃಢೀಕರಣ ಪತ್ರವನ್ನು ಒದಗಿಸಬೇಕು.

9) ದಿನಾಂಕ:01-04-2006ರ ನಂತರ ಸಿವಿಲ್ ಸೇವೆಗೆ ನೇಮಕ ಹೊಂದಿರುವವರಿಗೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/(ಎಸ್‌ಪಿಎಲ್)/04/ಪಿಇಟಿ/2005, ದಿನಾಂಕ:31-05-2006ರಲ್ಲಿನ ನೂತನ ಪಿಂಚಣಿ ಯೋಜನೆ (NPS) ಅನ್ವಯವಾಗುತ್ತದೆ.

10) ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರಗಳು ಮತ್ತು ವಿವಾಹಿತರಾಗಿದ್ದಲ್ಲಿ ಪತಿ-ಪತ್ನಿಯ ಜಂಟಿ ಭಾವಚಿತ್ರವನ್ನು (ಸ್ಟುಡಿಯೋದಲ್ಲಿ ತೆಗೆಸಿರುವ) ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಹಾಜರು ಪಡಿಸತಕ್ಕದು.

11) ಈ ನೇಮಕಾತಿಯು ಸರ್ಕಾರವು ಇಚ್ಛಿಸಿದ್ದಲ್ಲಿ ಅಥವಾ ಹುದ್ದೆಗಳು ರದ್ದಾದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಸೇವೆಯಿಂದ ತೆಗೆದು ಹಾಕಲಾಗುವುದು.

12) ಈ ಮೇಲ್ಕಂಡ ಷರತ್ತುಗಳಿಗೆ ಒಪ್ಪಿಕೊಂಡಿರುವ ಬಗ್ಗೆ ರೂ.200/- ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಪತ್ರವನ್ನು ಬರೆದು ಕೊಡತಕ್ಕದ್ದು.

23/3/23

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಇವರಿಗೆ:-

ಮೇಲ್ಕಂಡ ನೌಕರರುಗಳಿಗೆ.

ಪ್ರತಿಗಳು:-

1] ಆರ್ಥಿಕ ಸಲಹೆಗಾರರು ಹಾಗೂ ಮುಖ್ಯಲೆಕ್ಕಪತ್ರಾಧಿಕಾರಿಗಳು, ಖಾದಿ ಮಂಡಳಿ, ಬೆಂಗಳೂರು.
2] ಲೆಕ್ಕಪತ್ರಾಧಿಕಾರಿಗಳು, ಖಾದಿ ಮಂಡಳಿ, ಬೆಂಗಳೂರು.
3] ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಆಪ್ತ ವಿಭಾಗ, ಖಾದಿ ಮಂಡಳಿ, ಬೆಂಗಳೂರು.
4) ಅಧೀಕ್ಷಕರು, ಸಿಬ್ಬಂದಿ ವಿಭಾಗ/ರಾಜ್ಯ ಧನ ಸಹಾಯ ವಿಭಾಗ ಖಾದಿ ಮಂಡಳಿ, ಬೆಂಗಳೂರು.
5) ಮೇಲ್ಕಂಡ ಎಲ್ಲಾ ಸಿಬ್ಬಂದಿ/ನೌಕರರ ವೈಯಕ್ತಿಕ ಕಡತ/ಸೇವಾ ಪುಸ್ತಕಕ್ಕೆ.
6) ಕಛೇರಿ ಪ್ರತಿ.